ಶ್ರೀ ವಿ. ಧನಂಜಯ ಕುಮಾರ್.—ವಿಷಯ ಬಹಳ ಗಂಭೀರವಾಗಿದೆ. ಆದುದರಿಂದ ಮೂತ ನಾಡುವುದಕ್ಕೆ ಅವಕಾಶ ಮಾಡಿಕೊಡಿ.

(ಗೊಂದಲ)

ಅಧ್ಯಕ್ಷರು.—ನಿಯಮ ೩೫ರ ಕೆಳಗೆ ಯಾರು ಕೊಟ್ಟಿದ್ದಾರೆ ಅವರು ಪದೇ ಪದೇ ಹೇಳಬೇಕಾಗಿಲ್ಲ ಎಷ್ಟು ವಿಷಯ ಇದೆ ಅಷ್ಟು ಮಾತ್ರ ಹೇಳಿ, ಅದಾದಮೇಲೆ ಚರ್ಚೆ ಮಾಡುವುದಕ್ಕೆ ಅವಕಾಶವಿಲ್ಲ.

ಶ್ರೀ ವಿ. ಧನಂಜಯ ಕುಮಾರ್.—ಪ್ರಿನ್ಸಿಪಾಲ್‌ರವರು ಮತ್ತು ಎಸ್. ಪಿ. ಇಬ್ಬರೂ ಸೇರಿ ಈ ಕೆಲಸ ಮಾಡಿದ್ದಾರೆ. ಇದರಿಂದ ಅಲ್ಲಿಯ ಪರಿಸ್ಥಿತಿ ಬಹಳ ಉದ್ರೇಕ ಗೊಂಡಿದೆ,

ಅಧ್ಯಕ್ಷರು.—ಡಿಟೇಲ್ಸ್ ಇದ್ದರೆ ಮಂತ್ರಿಗಳಿಗೆ ಕೊಡಿ.

ಶ್ರೀ ವಿ. ಧನಂಜಯ ಕುಮಾರ್.—ಸಾಕಷ್ಟು ವಿಚಾರಗಳು ಪತ್ರಿಕೆಯಲ್ಲೂ ಕೂಡ ಬಂದಿವೆ. ರಾಜ್ಯಪಾಲರವರ ಹತ್ತಿರ ಮನವಿಯನ್ನು ಅರ್ಪಿಸಿದ್ದಾರೆ. ಆಡಳಿತ ಪಕ್ಷದವರೇ ಈ ರೀತಿ ಮಾಡಿದರೆ ನಮಗೆ ನ್ಯಾಯ ದೊರಕಿಸಿಕೊಡುವವರು ಯಾರು ? ಇದರ ಬಗ್ಗೆ ಕೂಲಂಕಷವಾಗಿ ನ್ಯಾಯಾಂಗ ತನಿಖೆ ಯಾಗಬೇಕೆ, ಸಂಬಂಧಪಟ್ಟ ಅಧಿಕಾರಿಗಳು, ಪ್ರಿನ್ಸಿಪಾಲ್‌ರವರು ಮತ್ತು ಎಸ್. ಐ. ರವರ ಮೇಲೆ ಸೂಕ್ತ ಕ್ರಮ ತೆಗೆದುಕೊಂಡು ಇವರನ್ನು ಕೂಡಲೇ ಅಲ್ಲಿಂದ ವರ್ಗಾವಣೆ ಮಾಡಬೇಕು. ಇಲ್ಲದಿದ್ದರೆ ಅಹಿತರ ಘಟನೆಗಳು ಸಂಭವಿಸುವುದು ಉಂಟು. ಇದರಿಂದ ರಾಜ್ಯಾದ್ಯಂತ ವಿದ್ಯಾರ್ಥಿಗಳು, ಯುವಕರು ಎಲ್ಲಾ ಸರ್ಕಾರದ ವಿರುದ್ಧ ದಂಗೆ ಏಳುತ್ತಾರೆ.

ಶ್ರೀ ಎ. ಲಕ್ಷ್ಮೀಸಾಗರ್.—ಇದರ ಬಗ್ಗೆ ಸರ್ಕಾರಕ್ಕೆ ಏನು ವರದಿ ಬಂದಿಲ್ಲ. ವಿಷಯ ಪ್ರಸ್ತಾಪ ಮಾಡಿದ್ದಾರೆ, ವರದಿ ತರಿಸಿಕೊಂಡು ಏನು ಎನ್ನುವುದನ್ನು ಹೇಳುತ್ತೇನೆ. ಸೂಕ್ತ ಕ್ರಮವನ್ನು ನ್ಯಾಯವಾದ ರೀತಿಯಲ್ಲಿ ಕಾನೂನು ಪ್ರಕಾರ ತೆಗೆದುಕೊಳ್ಳುತ್ತೇನೆಂದು ಆಶ್ವಾಸನೆಯನ್ನು ಕೊಡುತ್ತೇನೆ.

(ಗೊಂದಲ)

ಅಧ್ಯಕ್ಷರು.—ಹೇಳಿದ ತಕ್ಷಣ ಉತ್ತರ ಹೇಗೆ ಸಿಗುತ್ತದೆ, ದಯವಿಟ್ಟು ಕುಳಿತುಕೊಳ್ಳಿ.

ಶ್ರೀ ಮಲ್ಲಾರಗೌಡಪಾಟೀಲ್.—ಅಧ್ಯಕ್ಷರೇ, ಹಿರೇಕೆರೂರು ತಾಲ್ಲೂಕಿನಲ್ಲಿ ರೈತ ಜನಾಂಗದವರು ಪ್ರೈಮರೀ ಬ್ಯಾಂಕಿಂಗಿಂದ ಹಾಗೂ ಮಧ್ಯತರ ಬ್ಯಾಂಕುಗಳಿಂದ ಸಾಲ ಪಡೆಯಬೇಕಾದರೆ ಸಬ್‌ರಿಜಿಸ್ಟ್ರಾರ್ ಕಚೇರಿಯಲ್ಲಿ ೧೦೦ ರೂಪಾಯಿಗಳಿಗೆ ೧೦ ರೂಪಾಯಿನ ಸ್ಟಾಂಪ್ ತೆಗೆದುಕೊಳ್ಳಬೇಕಾಗುತ್ತದೆ. ಒಂದು ಸಾವಿರ, ನಾಲ್ಕು ಸಾವಿರ, ಹತ್ತು ಸಾವಿರ ರೂಪಾಯಿಗಳವರೆಗೆ ಸಾಲ ತೆಗೆದುಕೊಳ್ಳಬೇಕಾದರೆ ಬಹಳ ತೊಂದರೆಯಾಗುತ್ತದೆ. ಇದರಿಂದ ರೈತರಿಗೆ ಬಹಳ ತೊಂದರೆಯಾಗಿದೆ. ಸಬ್‌ರಿಜಿಸ್ಟ್ರಾರ್ ರವರಿಗೆ ಇದರ ಬಗ್ಗೆ ಸೂಕ್ತ ಸೂಚನೆ ಕೊಡಬೇಕೆಂದು ತಮ್ಮ ಮುಖೇನ ನಾನು ಕೇಳಿ ಕೊಳ್ಳುತ್ತೇನೆ.

ಶ್ರೀ ಆರ್. ಎಲ್. ಜಾಲಪ್ಪ.—ಅಧ್ಯಕ್ಷರೇ, ವಿಷಯ ನನ್ನ ಗಮನಕ್ಕೆ ಬಂದಿಲ್ಲ. ಸರ್ಕಾರದ ಗಮನಕ್ಕೂ ಸಹ ಬಂದಿಲ್ಲ, ಇದರ ಬಗ್ಗೆ ನಾಳೆ ದಿವಸ ಹೇಳುತ್ತೇನೆ.

೧—೩೦ ಪಿ. ಎಂ.

ಶ್ರೀ ಎಂ. ಆನಂದರಾವ್.—ಅಧ್ಯಕ್ಷರೇ, ಇವತ್ತಿನ ಇಂಡಿಯನ್ ಎಕ್ಸ್‌ಪ್ರೆಸ್ ಪತ್ರಿಕೆಯಲ್ಲಿ ಭಾರತೀಯ ಮಜ್ದೂರ್ ಸಂಘದವರು Stir on minimum wages ಬಗ್ಗೆ, ಸರ್ಕಾರದ ಗಮನ ವನ್ನು ಸೆಳೆಯುತ್ತಿದ್ದಾರೆ. ಆಗರಬತ್ತಿ, ಕಲ್ಲು ಹೊಡೆಯುವುದು, ಗೋಡಂಬಿ ಕಾರ್ಖಾನೆ, ವಸತಿ ಗೃಹಗಳು, ಎಣ್ಣೆ ಕಾರ್ಖಾನೆ, ಪ್ಲೈವುಡ್ ಕಾರ್ಖಾನೆ, ಮನೆ ಕೈಗಾರಿಕೆ ಇವುಗಳಿಗೆ ಸಂಬಂಧಿಸಿ ದಂತೆ, ರಾಜ್ಯದ ಳಿಗೆ ಲಕ್ಷ ಅಸಂಘಟಿತ ಕಾರ್ಮಿಕರಿಗೆ ವೇತನ ನಿಗದಿ ಮಾಡಿಲ್ಲವೆಂದು ತಿಳಿದು ಬಂದಿದೆ. ಭಾರತೀಯ ಮಜ್ದೂರ್ ಸಂಘದವರು ಈ ಬೇಡಿಕೆ ಇಡೇರದಿದ್ದರೆ, "ವಿಧಾನ ಸೌಧ ಚಲೋ" ಚಳುವಳಿ ಮಾಡಬೇಕೆಂದು ಹೊರಟಿದ್ದಾರೆ ಸರ್ಕಾರ ಈ ಬಗ್ಗೆ ಕೂಡಲೇ ಗಮನಹರಿಸಿ, ಈ ಚಳುವಳಿಗೆ ಅವಕಾಶ ಕೊಡದೇ, ಈ ಕಾರ್ಮಿಕರ ಬೇಡಿಕೆಗಳು ಏನಿವೆ ಅವುಗಳನ್ನು ಒಪ್ಪಬೇಕು ಎಂದು ಹೇಳಿ ಈ ಮೂಲಕ ಸರ್ಕಾರದ ಗಮನವನ್ನು ಸೆಳೆಯುತ್ತಿದ್ದೇನೆ.

ಶ್ರೀ ಎ. ಲಕ್ಷ್ಮೀಸಾಗರ್.—ವಿವರಗಳನ್ನು ತರಿಸಿ ನೋಡುತ್ತೇನೆ. ಮಿನಿಮಮ್ ವೇಜಸ್ ಫಿಕ್ಸ್ ಮಾಡುವ ವಿಚಾರ, ಅದು ಪಾಲಿಸಿಗೆ ಸಂಬಂಧಪಟ್ಟ ವಿಚಾರ. ಈಗಾಗಲೇ ಈ ಬಗ್ಗೆ ಕಮಿಟಿಯನ್ನು

ಮಾಡಿದೆ. ಅದರಲ್ಲಿ ತಮ್ಮ ವಿಚಾರವನ್ನು ಹೇಳುವುದಕ್ಕೆ ಅವಕಾಶ ಇದೆ. ವರದಿ ಬಂದಮೇಲೆ ಸೂಕ್ತ ಕ್ರಮ ತೆಗೆದುಕೊಳ್ಳಲಾಗುವುದು ಎಂಬ ವಿಚಾರವನ್ನು ಹೇಳುತ್ತೇನೆ.

ಶ್ರೀ ಪಂಪಾಪತಿ (ದಾವಣಗೆರೆ).—ಎಲ್ಲದಕ್ಕೂ ಪರಿಶೀಲನೆ ಮಾಡುತ್ತೇವೆಂದು ಹೇಳುತ್ತೀರಿ. ೨೬ ಕೈಗಾರಿಕೆಗಳಿಗೆ ಕನಿಷ್ಠ ಕೂಲಿ ನಿಗದಿ ಮಾಡಿದರು. ಈ ರೀತಿ ನಿಗದಿ ಮಾಡಿರುವುದಕ್ಕೆ ಹೈಕೋರ್ಟಿನಲ್ಲಿ ಸ್ಟೇ ತಂದರು. ಈ ಬೆಲೆ ಏರಿಕೆ ಸಂದರ್ಭದಲ್ಲಿ ೧೫೦ ರೂ. ದಿವಸ ಜೀವನ ಮಾಡುವುದೇ ಕಷ್ಟವಾಗಿದೆ. ಆದ್ದರಿಂದ ಆದಷ್ಟು ಬೇಗ ಈ ವಿಚಾರವನ್ನು ಪರಿಶೀಲನೆ ಮಾಡದೇ ಹೋದರೆ ಅವರು ಜೀವನ ಮಾಡುವುದಾದರೂ ಹೇಗೆ ?

ಶ್ರೀ ಎ. ಲಕ್ಷ್ಮೀಸಾರ್.—ಮಾನ್ಯ ಸದಸ್ಯರು ಪದೇ ಪದೇ ಕೇಳುತ್ತಾರೆ. ಸರ್ಕಾರದ ನಿಖರವಾದ ನೀತಿ ಬಗ್ಗೆ, ಕಾರ್ಯಕ್ರಮದ ಬಗ್ಗೆ ಈಗ ಉತ್ತರಕೊಡತಕ್ಕಂಥಾದ್ದು ಅನರಿಯೊಲಿಸ್ಟಿಕ್ ಆಗುತ್ತದೆ. ಇದು ದೊಡ್ಡ ಪ್ರಶ್ನೆ ಇಗ ಅವರು ಹೇಳಿದ್ದು ಕೆಲವು ಕಾರ್ಮಿಕರಿಗೆ ಸಂಬಂಧಪಟ್ಟದ್ದು ಮಾತ್ರವಲ್ಲ, ಇಡೀ ಕಾರ್ಮಿಕವರ್ಗಕ್ಕೇ ಸಂಬಂಧಪಟ್ಟ ವಿಚಾರ. ಮಿನಿಮಮ್ ವೇಜಸ್ ಕೊಡದೇ ಹೋದರೆ. ವಿಧಾನ ಸೌಧ ಚಲೋ ಎಂದು ಹೇಳಿದರೆ ಹೇಗೆ ?

ಶ್ರೀ ಎಂ. ಎಸ್. ಕೃಷ್ಣನ್.—೩೩೪ರ ವ್ಯಾಪ್ತಿಯಲ್ಲಿ ಈ ವಿಷಯ ಏನಾಗಿದೆ ಎಂದು ಎಲ್ಲರೂ ಕೇಳಿದ್ದಾರೆ. ಎಲ್ಲರಿಗೂ ಒಂದೇ ಉತ್ತರ ಬರುತ್ತಿದೆ.

ಅಧ್ಯಕ್ಷರು.—ನಾನೇ ಒಪ್ಪುವುದಿಲ್ಲ.

ಶ್ರೀ ಎಂ. ಎಸ್. ಕೃಷ್ಣನ್.—೩೩೪ರ ಮಂತ್ರಿ ಎಂದೇ ಪೆಸರು ಇಟ್ಟುಬಿಡಿ. ನಿಖರವಾದ ಉತ್ತರ ಯಾರಿಗೂ ಕೊಟ್ಟಿಲ್ಲ.

MR. CHAIRMAN.—This is unfair. I am also trying to get the replies, from the Government.

ಶ್ರೀ ಎಂ. ಎಸ್. ಕೃಷ್ಣನ್.—ಮಾನ್ಯ ಜಾಲಪ್ಪನವರು ಕೂಡ ೩೩೪ನ್ನು, ನಾಳೆ ಪರಿಶೀಲಿಸುತ್ತೇನೆ ಎಂದು ಹೇಳುತ್ತಾರೆ.

ಅಧ್ಯಕ್ಷರು. ೩೩೪ನ್ನು ೩೩೪ರಲ್ಲಿ ಅನೇಕರಿಗೆ ಉತ್ತರಗಳು ಸಿಕ್ಕಿವೆ.

ಶ್ರೀ ಕೆ. ಬಿ. ಶ್ಯಾಣಪ್ಪ.—ಸದನದಲ್ಲಿದ್ದಾಗ ಉತ್ತರ ಕೊಡಲು ಕಷ್ಟವಾಗುತ್ತದೆ. ನಾನು ೨೦ ದಿವಸಗಳ ಹಿಂದೆ ೩೩೪ರ ಬಗ್ಗೆ ಕೇಳಿದಾಗ ಸೂಕ್ತವಾದ ಕ್ರಮ ಕೈಗೊಳ್ಳುತ್ತೇವೆಂದು ಉತ್ತರ ಹೇಳಿದಿರಿ ಇದರ ಬಗ್ಗೆ ಏನು ಕ್ರಮ ತೆಗೆದುಕೊಳ್ಳುತ್ತೀರೆಂದು ಹೇಳುತ್ತೀರಾ ?

ಅಧ್ಯಕ್ಷರು.—೩೩೪ರ ಬಗ್ಗೆ ಕೇಳುವಾಗಲೇ ಉತ್ತರ ಬರದೇ ಹೋದರೂ ಕ್ರಮ ತೆಗೆದುಕೊಳ್ಳುತ್ತೇವೆ ಎಂದು ಹೇಳುತ್ತಾರೆ. ಉತ್ತರ ತರಿಸಿಕೊಳ್ಳುವುದಕ್ಕೆ ಬೇರೆ ಬೇರೆ ನಿಯಮಗಳಲ್ಲಿ ಅವಕಾಶ ಇದೆ. ಸದಸ್ಯರು ಆ ನಿಯಮಗಳ ಪ್ರಕಾರ, ಸರ್ಕಾರಕ್ಕೆ ಒತ್ತಾಯ ತಂದು ಉತ್ತರ ಪಡೆಯಬೇಕು. ಆದರೂ ಸಹ ನಾನು ೩೩೪ರಲ್ಲಿ ಅನೇಕ ಸಾರಿ ಉತ್ತರ ತರಿಸಿಕೊಟ್ಟಿದ್ದೇನೆ.

ಶ್ರೀ ಪಂಪಾಪತಿ.—ನಮ್ಮದೂ ಒಂದು ೩೩೪ನೇ ನಿಯಮದ ನೋಟೀಸ್ ಇತ್ತು.

ಅಧ್ಯಕ್ಷರು.—ನಿಮ್ಮನ್ನು ಮೊದಲೇ ಕರೆದೆ, ನೀವು ಇರಲಿಲ್ಲ. ನಾಳೆ ಕರೆಸಿ ತೆಗೆದುಕೊಳ್ಳುತ್ತೇನೆ.

ಶ್ರೀ ಪಂಪಾಪತಿ.—ಅದು ಹರಿಜನರಿಗೆ ಸಂಬಂಧಪಟ್ಟದ್ದು. ಹರಿಜನರಿಗೆ ಸಂಬಂಧಪಟ್ಟದ್ದಕ್ಕೆ ಎಲ್ಲರಿಗೂ ಅವಕಾಶ ಕೊಟ್ಟಿದ್ದೀರಿ, ನನಗೂ ಅವಕಾಶ ಕೊಡಬೇಕು. ನಮ್ಮ ದಾವಣಗೆರೆ ಕ್ಷೇತ್ರದಲ್ಲಿ ೩೬ ಗುಡಿಸಲುಗಳು ಸಂಪೂರ್ಣ ಸುಟ್ಟು, ಉಟ್ಟ ಬಟ್ಟೆ ಬಿಟ್ಟು ಏನಹ ಬೇರೆ ಏನೂ ಉಳಿದಿಲ್ಲ. ಅವರೆಲ್ಲ ಜನ ನಿರ್ಗತಿಕರಾಗಿದ್ದಾರೆ. ಬೀದಿ ಪಾಲಾಗಿದ್ದಾರೆ. ಇವರಿಗೆ ಕೂಡಲೆ ವಸತಿ ಸೌಕರ್ಯ ಒದಗಿಸುವುದಕ್ಕೆ ಮಾನ್ಯ ಮುಖ್ಯಮಂತ್ರಿಗಳಿಗೆ ಕಂದಾಯ ಮಂತ್ರಿಗಳಿಗೆ ಮನವಿಯನ್ನು ಕೊಟ್ಟಿದ್ದೇನೆ. ಅವರೆಲ್ಲ ಅಧಿಕಾರಿಗಳು ವಸತಿ ಸೌಕರ್ಯ ಒದಗಿಸಿಕೊಡುವುದಕ್ಕೆ ಕ್ರಮಕೈಗೊಳ್ಳುತ್ತಾರೆ ಎನ್ನುವ ದೃಷ್ಟಿಯಿಂದ ಕೇಳುತ್ತಿದ್ದೇನೆ,

ಶ್ರೀ ವಿ. ಎಲ್. ಪಾಟೀಲ್ (ಕಂದಾಯ ಸಚಿವರು).—ಇವರ ಬಗ್ಗೆ ಪರಿಶೀಲನೆ ಮಾಡಿ, ವರದಿ ತರಿಸಿ ಹೇಳುತ್ತೇನೆ.

ಶ್ರೀ ಪಂಪಾಪತಿ.—ಅಧಿಕಾರಿಗಳಿಗೆ ತಕ್ಷಣ ಕ್ರಮ ಕೈಗೊಳ್ಳುವುದಕ್ಕೆ ಹೇಳಬೇಕು. ಅವರಿಗೆ ಬೇಕಾದಂತಹ ಹೆಂಚು, ಮರಮುಟ್ಟು, ಹಣ ಸಹಾಯ ಮಾಡಿದರೆ, ಅವರು ಮನೆ ಕಟ್ಟಿಕೊಳ್ಳುತ್ತಾರೆ. ಅವರೆಲ್ಲರೂ ಬೀದಿಪಾಲಾಗಿದ್ದಾರೆ. ಕೂಡಲೇ ಸಂಬಂಧಪಟ್ಟ ಅಧಿಕಾರಿಗಳಿಗೆ ತಿಳಿಸಿದರೆ ಅವರು ಕ್ರಮ ಕೈಗೊಳ್ಳುತ್ತಾರೆ.

ಶ್ರೀ ವಿ. ಎಲ್. ಪಾಟೀಲ್.—ಕೂಡಲೇ ವರದಿಯನ್ನು ತರಿಸಿ ಪರಿಶೀಲನೆ ಮಾಡುತ್ತೇವೆ.

(v) ಕಾಚರಕನಹಳ್ಳಿಯಲ್ಲಿ ಮನೆಗಳನ್ನು ಬಿ.ಡಿ.ಎ.ರವರು ಒಡೆದ ಬಗ್ಗೆ ನಿಲುವಳಿ ಸೂಚನೆಗೆ ಅವಕಾಶ ಕೋರಿ ಮನವಿ.

ಶ್ರೀ ಎಸ್. ಬಂಗಾರಪ್ಪ.—ಮಾನ್ಯ ಸಭಾಪತಿಯವರೇ, ನಾನು ಮತ್ತು ಸುಮಾರು ಅನೇಕ ಜನ ಮಾನ್ಯ ಸದಸ್ಯರು ಒಂದು ನಿಲುವಳಿ ಸೂಚನೆ ಕಳಿಸಿದ್ದೇವೆ.

ಅಧ್ಯಕ್ಷರು... ತಾವು ಕೂಡ ಕಳಿಸಿದ್ದೀರಿ.

ಶ್ರೀ ಎಸ್. ಬಂಗಾರಪ್ಪ.—ತಮ್ಮಿಂದ ಉತ್ತರ ಬಂದಿದೆ.

ಅಧ್ಯಕ್ಷರು.—ಮೂರು ದಿವಸ ಮುಂಚೆಯೇ ಕಳಿಸಿದ್ದೀರ ತಮಗೆ ಗೊತ್ತಿದೆ, ನೀವು ಸದನದಲ್ಲಿ ಹಳೆಯ ಮತ್ತು ಹಿರಿಯ ಸದಸ್ಯರು ಸಾಧಾರಣವಾಗಿ ೧೦—೧೦½ ಗಂಟೆಗೆ ಮುಂಚಿತವಾಗಿ ಕಳಿಸಬೇಕು. ಮೂರು ದಿವಸ ಮುಂಚಿತವಾಗಿ ಕಳಿಸಿದ್ದರಿಂದ ಅದನ್ನು ಪರಿವರ್ತನೆ ಮಾಡಿ ೭೩ನೇ ನಿಯಮದ ಕೆಳಗೆ ತೆಗೆದುಕೊಳ್ಳುವುದು ಈ ಬಗ್ಗೆ ಸಾಧ್ಯವೇ ಎಂಬುದನ್ನು ಪರಿಶೀಲಿಸುತ್ತೇನೆ. ತಾವು ಒಪ್ಪಿಕೊಳ್ಳುವುದಾದರೆ ನಾಳೆ ಹಾಕಂತ್ತೇನೆ.

ಶ್ರೀ ಎಸ್. ಬಂಗಾರಪ್ಪ.—೭೩ ಎಂದರೆ ಏನು ?

ಅಧ್ಯಕ್ಷರು.—ಕಾಲಿಂಗ ಅಟೆನ್‌ಷನ್.

ಶ್ರೀ ಎಸ್. ಬಂಗಾರಪ್ಪ.—ಕ್ಷಮಿಸಬೇಕು, ಕಾಲಿಂಗ ಅಟೆನ್‌ಷನ್ ಆಗಬಾರದು. ಅದರಲ್ಲಿ ವಿವರಗಳನ್ನು ಹೇಳುವುದಕ್ಕಾಗುವುದಿಲ್ಲ.

ಅಧ್ಯಕ್ಷರು.—ನಾನು ಈಗಾಗಲೇ ರೂಲಿಂಗ್ ಕೊಟ್ಟಿದ್ದೇನೆ.

ಶ್ರೀ ಎಸ್. ಬಂಗಾರಪ್ಪ.—ರೂಲಿಂಗ್ ಕೊಡಿ, ಬೇಡವೆಂದು ಹೇಳುವುದಿಲ್ಲ.

MR. CHAIRMAN.—At least we will get the statement.

ಶ್ರೀ ಎಸ್. ಬಂಗಾರಪ್ಪ.—ಸ್ಟೇಟ್‌ಮೆಂಟ್ ಕೊಡುವುದಕ್ಕಲ್ಲ, ದಯವಿಟ್ಟು ಗಮನಿಸಬೇಕು, ನಮಗೆ ರಕ್ಷಣೆ ಕೊಡಬೇಕು. ನಾವು ಸದನಕ್ಕೆ ವಿವರಗಳನ್ನು ಕೊಡಬೇಕಾಗುತ್ತದೆ.....

ಅಧ್ಯಕ್ಷರು.—ಪ್ರಶ್ನೋತ್ತರ ಮುಂಗಿದ ತಕ್ಷಣ ತಾವು ಎತ್ತಬೇಕಾಗಿತ್ತು.

ಶ್ರೀ ಎಸ್. ಬಂಗಾರಪ್ಪ.—I don't mind converting that into a call attentions. matter of discussion.. ...ಗಮನ ಸೆಳೆಯುವ ಸೂಚನೆಯಿಂದ ಇದಕ್ಕೆ ಪರಿಹಾರ ಸಿಕ್ಕುವುದಿಲ್ಲ. ತಾವು ದಯವಿಟ್ಟು ವಿಚಾರ ಮಾಡಿ.

MR. CHAIRMAN.—I have gone to the next business. Adjournment Motion gets the priority. You could have raised immediately after the question hour.

ಶ್ರೀ ಎಸ್. ಬಂಗಾರಪ್ಪ.—ಈಗ ನಿಲುವಳಿ ಸೂಚನೆ ಮುಖಾಂತರ ಈ ವಿಷಯವನ್ನು ಚರ್ಚೆ ಮಾಡಲೇಬೇಕು ಎಂಬ ಆಸೆ ನಮಗೆ ಇದೆ. ಏಕೆಂದರೆ ಅಲ್ಲಿ ಪರಿಸ್ಥಿತಿ ಆ ರೀತಿ ಇದೆ. ಈಗ ವಿವರಗಳಿಗೆ ನಾನು ಹೋಗುವುದಿಲ್ಲ. ತಾವು ಅನುಮತಿ ಕೊಡಬೇಕು, ವಿಷಯವನ್ನು ಪ್ರಸ್ತಾಪ ಮಾಡಬೇಕಾಗುತ್ತದೆ. ಗಮನ ಸೆಳೆಯುವ ಸೂಚನೆಗೆ ಅನುಮತಿ ಕೊಡುವ ಹಾಗಿದ್ದರೆ, ಅದರಲ್ಲಿ ಹೇಳುವುದಕ್ಕಾಗುವುದಿಲ್ಲ. ೧೫ ಸಾವಿರ ಮನೆಗಳನ್ನು ನೋಟಿಫಿಕೇಷನ್ ಮಾಡಿ.....